**ದಿನಾಂಕ: 16.02.2019 ರಂದು ಮಲ್ಲಸಂದ್ರ, ವಾರ್ಡ್ ನಂ.13 ರಲ್ಲಿ ನಡೆದ ವಾರ್ಡ್ ಸಭಾ ನಡವಳಿಗಳು**

ದಿನಾಂಕ 16-02-2019 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸದಸ್ಯರು ಮಲ್ಲಸಂದ್ರ, ವಾರ್ಡ್ ನಂ-13 ರ ಕಛೇರಿಯಲ್ಲಿ ಮಾನ್ಯ ಶ್ರೀ.ಎನ್.ಲೋಕೇಶ್, ಬಿ.ಬಿ.ಎಂ.ಪಿ ಸದಸ್ಯರು ಇವರ ಅಧ್ಯಕ್ಷತೆಯಲ್ಲಿ ವಾರ್ಡ್ ಸಭೆಯನ್ನು ನಡೆಸಲಾಗಿದೆ. ಸದರಿ ಸಭೆಯಲ್ಲಿ ವಾರ್ಡ್ ಸಮಿತಿಯ ಎಲ್ಲಾ ಸದಸ್ಯರು ಸಮಿತಿಯ ಕಾರ್ಯದರ್ಶಿ ವಾರ್ಡ್ ನಂ-13 ರ ಸಹಾಯಕ ಅಭಿಯಂತರರು ಶ್ರೀ ವಿ.ಆರ್. ಕೃಷ್ಣಪ್ಪನವರು ಹಾಗೂ ರಾಜೇಂದ್ರ ನಾಯಕ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ಉಪವಿಭಾಗ ದಾಸರಹಳ್ಳಿ, ಆರೋಗ್ಯ ಇಲಾಖೆಯ ಶ್ರೀ ಶಿವಣ್ಣನವರು ಹಾಗೂ ಕಸವಿಲೇವಾರಿ ಉಪವಿಭಾಗದ ವತಿಯಿಂದ ಲೋಹಿತ್ ಕುಮಾರ್ ಹಾಗೂ ವಾರ್ಡ್ ಸಮಿತಿಯ ಎಲ್ಲಾ ಸದಸ್ಯರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

ಸದರಿ ಸಭೆಯಲ್ಲಿ ಈ ಕೆಳಕಂಡಂತೆ ನಿರ್ಣಯಗಳನ್ನು ತೀರ್ಮಾನಿಸಲಾಗಿದೆ.

1. ಒಂಟಿ ಮನೆಗಳ ಅರ್ಜಿಗಳಲ್ಲಿ ಈಗಾಗಲೇ 222 ಸಂಖ್ಯೆ ಹೊಸ ಮನೆಗಳ ಪಟ್ಟಿಯು ಬಿಬಿಎಂಪಿ ಕೇಂದ್ರ ಕಛೇರಿಯ ಸಮಿತಿಗೆ ಅನುಮೋದನೆಗಾಗಿ ಸಲ್ಲಿಸಲಾಗಿದ್ದು, ಸಮಿತಿಯಿಂದ ಅನುಮೋದನೆ ದೊರಕುವವರೆಗೂ ಯಾವುದೇ ಸಾಮಾನ್ಯ ವರ್ಗದ ಹೊಸ ಮನೆಗಳ ಕಡತಗಳನ್ನು ಕಳುಹಿಸದಿರಲು ತೀರ್ಮಾನಿಸಲಾಗದೆ ಹಾಗೂ ಸದರಿ ಅರ್ಜಿಗಳಲ್ಲಿ ಎಸ್‌ಸಿ/ಎಸ್‌ಟಿ ಫಲಾನುಭವಿಗಳಿಗೆ ಸಂಬಂಧಿಸಿದ 90 ಸಂಖ್ಯೆ ಹೊಸ ಒಂಟಿ ಮನೆಗಳ ಅರ್ಜಿಗಳನ್ನು ಸಾಮಾಜಿಕ ನ್ಯಾಯ ಸಮಿತಿಯ ಮುಂದೆ ಮಂಡಿಸಲು ತೀರ್ಮಾನಿಸಲಾಯಿತು.
2. ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳ ನಿರ್ವಹಣೆಯ ಗುತ್ತಿಗೆದಾರರು ದೊಡ್ಡಬಿದರಕಲ್ಲು ಮತ್ತು ಮಲ್ಲಸಂದ್ರ ಎರಡೂ ವಾರ್ಡ್‌ಗಳ ಬೀದಿ ದೀಪಗಳ ನಿರ್ವಹಣೆಗೆ ಒಂದೇ ವಾಹನವನ್ನು ನಿಯೋಜಿಸಿರುತ್ತಾರೆ. ಆದುದರಿಂದ ಸದರಿ ಗುತ್ತಿಗೆದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಹಾಗೂ ನೋಟೀಸ್ ನೀಡಲು ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ವಿಭಾಗ ಬಿಬಿಎಂಪಿ ರವರಿಗೆ ತಿಳಿಸಲು ತೀರ್ಮಾನಿಸಲಾಯಿತು. ಹಾಗೂ ಕೆಟ್ಟು ಹೋಗಿರುವ ಬೀದಿ ದೀಪಗಳನ್ನು ರಿಪೇರಿ ಮಾಡಲು ಸೂಚಿಸಲಾಯಿತು.
3. ಕಸ ವಿಲೇವಾರಿಯನ್ನು ಸರಿಯಾಗಿ ನಿರ್ವಹಿಸದೇ ಇರುವುದರಿಂದ ಬಲ್ಕ್ ಜನರೇಟರ್ ರವರಿಗೆ ನೋಟೀಸ್ ನೀಡಲು ತೀರ್ಮಾನಿಸಲಾಯಿತು.
4. ವಾರ್ಡ್‌ನ ಬಿ.ಹೆಚ್.ಇ.ಎಲ್. ಮಿನಿಕಾಲೋನಿ ಸ್ಲಂ ಏರಿಯಾಗಳಲ್ಲಿ ವಿದ್ಯುತ್ ಕಂಬಗಳನ್ನು ಅಳವಡಿಸಿ ಹಾಗೂ ದೀಪಗಳನ್ನು ಅಳವಡಿಸಲು ತೀರ್ಮಾನಿಸಲಾಯಿತು.
5. ವಾರ್ಡ್‌ನ ವಿ.ಎನ್. ಬಾರ್ ಹತ್ತಿರ, ಶೂಟಿಂಗ್ ಬಂಗಲೆ ರಸ್ತೆ ಹಾಗೂ ಹರ್ಷಿತ್ ಬಾರ್ ಹತ್ತಿರ ಸಮಾರು 150 ಮೀಟರ್ ಉದ್ದಕ್ಕೆ ಹಾಗೂ ಬ್ಲಾಕ್ ಸ್ಪಾಟ್‌ಗಳಲ್ಲಿ ಸರಿಯಾಗಿ ಕಸ ವಿಲೇವಾರಿ ಮಾಡದೆ ಇರುವುದು ಕಂಡು ಬಂದಿದ್ದು, ಸಹಾಯಕ ಕಾರ್ಯಪಾಲಕ ಅಭಿಯಂತರರು SWM ರವರಿಗೆ ನೋಟೀಸ್ ನೀಡಲು ತೀರ್ಮಾನಿಸಲಾಯಿತು.

6. ಮಲ್ಲಸಂದ್ರ ಸರ್ಕಾರಿ ಶಾಲೆಯ ಎದುರು ಫುಟ್ ಪಾತ್ ಮೇಲಿರುವ ಹೋಟೇಲ್‌ನಿಂದ ಬರುವ ಕಸ ಮತ್ತು ಮುಸುರೆ ಅಲ್ಲೆ ಸುರಿಯುವುದರಿಂದ ಸಾರ್ವಜನಿಕರಿಗೆ ಕೆಟ್ಟ ವಾಸನೆ ಮತ್ತು ಮೋರಿ ಬ್ಲಾಕ್ ಆಗುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುದೆ. ಇದರ ಬಗ್ಗೆ ಆರೋಗ್ಯ ಇಲಾಖೆಯ ಆರೋಗ್ಯ ಪರಿವೀಕ್ಷಕರಿಗೆ ನೋಟೀಸ್ ನೀಡಲು ತೀರ್ಮಾನಿಸಲಾಗಿದೆ.
7. ಪ್ರತಿ ಬಾರಿ ವಾರ್ಡ್ ಸಭೆಗೆ ಪೊಲೀಸ್ ಇಲಾಖೆಯವರು ಗೈರು ಹಾಜರಾಗಿದ್ದು, ಇವರಿಗೆ ನೋಟೀಸ್ ನೀಡಲು ಹಾಗೂ ಪೈಪ್ ಲೈನ್ ಪಾರ್ಕ್ ರಸ್ತೆಯಲ್ಲಿ ಅನಧಿಕೃತವಾಗಿ ವಾಹನಗಳನ್ನು ನಿಲ್ಲಿಸುವುದನ್ನು ತಪ್ಪಿಸಿ, ಪಾರ್ಕ್‌ನ ಒಂದು ಬದಿಯಲ್ಲಿ ಮಾತ್ರ ಪಾರ್ಕಿಂಗ್ ಮಾಡಲು ಕ್ರಮ ತೆಗೆದುಕೊಳ್ಳುವಂತೆ ಪೊಲೀಸ್ ಇನ್ಸ್‌ಪೆಕ್ಟರ್ ರವರಿಗೆ ಹಾಗೂ ಟ್ರಾಫಿಕ್ ಪೊಲೀಸ್ ಕಮೀಷನರ್ ರವರಿಗೆ ಪತ್ರ ಬರೆಯಲು ತೀರ್ಮಾನಿಸಲಾಯಿತು.
8. ಚುನಾವಣೆ ನೀತಿ ಸಂಹಿತೆ ಬರುವುದರಿಂದ ಡಿಸೆಂಬರ್ ತಿಂಗಳಿನಲ್ಲಿ ಟೆಂಡರ್ ಆಗಿರುವ ಕಾಮಗಾರಿಗಳಿಗೆ ತುರ್ತಾಗಿ ಕಾರ್ಯಾದೇಶ ನೀಡಿ, ಕಾಮಗಾರಿ ಪ್ರಾರಂಭಿಸಲು ಮತ್ತು 2018-19 ನೇ ಸಾಲಿನ ಪಿ.ಒ.ಡಬ್ಲ್ಯು ಹಾಗೂ ಇತರೆ ಕಾಮಗಾರಿಗಳನ್ನು ಚುನಾವಣೆ ನೀತಿ ಸಂಹಿತೆ ಬರುವುದರೊಳಗಾಗಿ ಟೆಂಡರ್ ಕರೆದು ಕಾರ್ಯಾದೇಶ ನೀಡಲು ಕ್ರಮ ಕೈಗೊಳ್ಳುವಂತೆ ಮುಖ್ಯ ಅಭಿಯಂತರರು, ದಾಸರಹಳ್ಳಿ ವಲಯ ಮತ್ತು ಕಾರ್ಯಪಾಲಕ ಅಭಿಯಂತರರು ದಾಸರಹಳ್ಳಿ ವಿಭಾಗ ರವರಿಗೆ ಸೂಚಿಸಲು ತೀರ್ಮಾನಿಸಲಾಯಿತು.
9. ಬೇಸಿಗೆ ಕಾಲವಾಗಿರುವುದರಿಂದ ಕುಡಿಯುವ ನೀರಿನ ಕಾಮಗಾರಿ ಎಸ್‌ಟಿ ಗುತ್ತಿಗೆದಾರರಿಗೆ ನಿಗದಿಯಾಗಿರುವ ಕಾಮಗಾರಿಗೆ ಕಾರ್ಯದೇಶ ನೀಡಿ ತುರ್ತಾಗಿ ಕಾಮಗಾರಿ ಪ್ರಾರಂಭಿಸಲು ಸೂಚಿಸುವಂತೆ ಕಾರ್ಯಪಾಲಕ ಅಭಿಯಂತರರು ದಾಸರಹಳ್ಳಿ ವಿಭಾಗ ರವರಿಗೆ ಸೂಚಿಸಲು ತೀರ್ಮಾನಿಸಲಾಯಿತು.

**ಕಾರ್ಯದರ್ಶಿ ಮತ್ತು ಸಂಚಾಲಕರು ಹಾಗೂ**
**ವಾಡ್ ಸಂಖ್ಯೆ.13 ಕಿರಿಯ ಅಭಿಯಂತರರು**
**ಶೆಟ್ಟಿಹಳ್ಳಿ ಉಪವಿಭಾಗ, ದಾಸರಹಳ್ಳಿ ವಲಯ**
**ಬಿಬಿಎಂಪಿ, ಬೆಂಗಳೂರು.**

ಪ್ರತಿಯನ್ನು:-

1. ಮಾನ್ಯ ಜಂಟಿ ಆಯುಕ್ತರು, ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
2. ಮಾನ್ಯ ಶ್ರೀ ಎನ್. ಲೋಕೇಶ್, ಬಿಬಿಎಂಪಿ ಸದಸ್ಯರು, ವಾರ್ಡ್ ಸಂಖ್ಯೆ 13, ಮಲ್ಲಸಂದ್ರ, ಬೆಂಗಳೂರು. ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
3. ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
4. ಕಾರ್ಯಪಾಲಕ ಅಭಿಯಂತರರು, (ಯೋಜನಾ ವಿಭಾಗ), ದಾಸರಹಳ್ಳಿ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ, ದಾಸರಹಳ್ಳಿ ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.

6. ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂಎಸ್.ಎಸ್.ಬಿ. ದಾಸರಹಳ್ಳಿ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಎಸ್.ಡಬ್ಲ್ಯೂ.ಎಂ, ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
8. ಕಲ್ಯಾಣಾಧಿಕಾರಿಗಳು, ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
9. ಆರಕ್ಷಕ ನಿರೀಕ್ಷಕರು, ಬಾಗಲಗುಂಟೆ ಪೋಲೀಸ್ ಠಾಣೆ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
10. ಉಪ ಆರೋಗ್ಯಧಿಕಾರಿಗಳು. ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ಶೆಟ್ಟಿಹಳ್ಳಿ ಉಪವಿಭಾಗ, ದಾಸರಹಳ್ಳಿ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
12. ಸಹ ಕಂದಾಯ ಅಧಿಕಾರಿ, ಶೆಟ್ಟಿಹಳ್ಳಿ ಉಪವಿಭಾಗ, ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
13. ಎಲ್ಲಾ ವಾರ್ಡ್ ಸಮಿತಿ ಸದಸ್ಯರುಗಳಿಗೆ/ಕಛೇರಿ ಪ್ರತಿ.